ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಸಂಖ್ಯೆ: ಕಾಸಂಫ/ DSS-Software/2014-15

ಕೃಷಿ ನಿರ್ದೇಶನಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು -1
ದಿನಾಂಕ: 07.08.2014

## ಸುತ್ತೋಲೆ

ವಿಷಯ : DSS (Decision Support System) ತಂತ್ರಾಂಶದಲ್ಲಿ ಆಗಸ್ಟ್ ಮಾಹೆಯಿಂದ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ನೀಡುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2014-15ನೇ ಸಾಲಿಗೆ DSS (Decision Support System) ತಂತ್ರಾಂಶವನ್ನು ಇಲಾಖೆಯಲ್ಲಿ ಅಳವಡಿಸಿದ್ದು, ಕೇಂದ್ರ ಕಚೇರಿಯಿಂದ ಯೋಜನಾವಾರು/ಕಾರ್ಯಕ್ರಮವಾರು ವಾರ್ಷಿಕ ಕಾರ್ಯಕ್ರಮವನ್ನು ತಂತ್ರಾಂಶದಲ್ಲಿ ನೀಡಲಾಗಿರುತ್ತದೆ. ಮುಂದುವರೆದು, ಸದರಿ ತಂತ್ರಾಂಶದ ಕುರಿತು ಕ್ಷೇತ್ರ ಮಟ್ಟ ಅಧಿಕಾರಿಗಳಿಗೆ ಈಗಾಗಲೇ ತರಬೇತಿ ನೀಡಿದ್ದು, ಜಂಟಿ ಕೃಷಿ ನಿರ್ದೇಶಕರ ಕಚೇರಿಯ ತಾಂತ್ರಿಕ ಅಧಿಕಾರಿಗಳು ಯೋಜನಾವಾರು, ಕಾರ್ಯಕ್ರಮವಾರು ಹಾಗೂ ತಾಲ್ಲೂಕುವಾರು ಆರ್ಥಿಕ ಮತ್ತು ಭೌತಿಕ ವಿವರಗಳನ್ನು ನಿಗದಿಪಡಿಸಿ ತಂತ್ರಾಶದಲ್ಲಿ ಅಳವಡಿಸುವ ಕಾರ್ಯ ತ್ವರಿತವಾಗಿ ಪೂರ್ಣಗೊಳಿಸತಕ್ಕದ್ದು. ಆಗಸ್ಟ್ 2014ರ ಮಾಹೆಯಿಂದ ಪ್ರಗತಿ ವರದಿಯನ್ನು DSS ತಂತ್ರಾಂಶದಲ್ಲೇ ಖಡ್ಡಾಯವಾಗಿ ಒದಗಿಸಬೇಕು, ಭೌತಿಕವಾಗಿ ಕಾಗದದ ಮೂಲಕ ಸಲ್ಲಿಸಲಾದ ಪ್ರಗತಿ ವರದಿಯನ್ನು ಪರಿಗಣಿಸುವುದಿಲ್ಲ. DSS ತಂತ್ರಾಂಶದಲ್ಲಿ ಪ್ರಗತಿ ವರದಿಯನ್ನು ಸಲ್ಲಿಸದೇ ಇರುವ ಜಿಲ್ಲೆಗಳ ಪ್ರಗತಿಯನ್ನು ಆ ಮಾಹೆಯಲ್ಲಿ ಶೂನ್ಯವೆಂದು ಪರಿಗಣಿಸಲಾಗುವುದು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಆಧ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲು ಸೂಚಿಸಿದೆ.

7.8.14

ಕೃಷಿ ಆಯುಕ್ತರು

ಪ್ರತಿಯನ್ನು
1. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು
2. ಎಲ್ಲಾ ನೋಡಲ್ ಅಧಿಕಾರಿಗಳು